## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 709(762) |
| ಸದಸ್ಯರ ಹೆಸರು | : | ಶ್ರೀ ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19/09/2022 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸರ್ಕಾರಿ ಮುದ್ರಣಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರೆಷ್ಟು; ಇವರು ಹುದ್ದೆಗಳ ಎದುರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆಯೇ;(ವಿವರ ನೀಡುವುದು); | ದಿನಗೂಲಿ ನೌಕರರ ಸಂಖ್ಯೆ:251.<br>ಕಾರ್ಯ ನಿರತ ದಿನಗೂಲಿ ನೌಕರರು ಯಾವುದೇ ಮಂಜೂರಾದ ಹುದ್ದೆಗೆದುರಾಗಿ ಕಾರ್ಯ ನಿರ್ವಹಿಸುತ್ತಿರುವುದಿಲ್ಲ. |
| ಆ) | 1994 ಹಾಗೂ 2008ರಲ್ಲಿ ಹುದ್ದೆಗಳ ಎದುರಾಗಿ ಕಾರ್ಯನಿರ್ವಹಿಸುತ್ತಿರುವ ನೌಕರರ ವಿವರವಾದ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಈ ಪಟ್ಟಿಯನ್ನು ಸರ್ಕಾರವು ಕಡೆಗಣಿಸಿರುವ ಉದ್ದೇಶವೇನು;(ವಿವರ ನೀಡುವುದು) | ಮಂಜೂರಾದ ಹುದ್ದೆಗಳಿಗೆ ಎದುರಾಗಿ ಕರ್ತವ್ಯ ನಿರ್ವಹಿಸದ ಕಾರಣ ಉದ್ಭವಿಸುವುದಿಲ್ಲ. |
| ಇ) | ಈ ನೌಕರರು ದಿನಗೂಲಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಕಾರಣ, ಹುದ್ದೆಗಳು ಸಮಾನವಾದ ವೇತನ ನೀಡಲು ಅವಕಾಶವಿಲ್ಲದ ಕಾರಣ, ಕಾರ್ಮಿಕ ಇಲಾಖೆಯಲ್ಲಿ ನಿಗಧಿಪಡಿಸಿದ ಅರೆ ಕುಶಲರು ಮತ್ತು ಕುಶಲರಲ್ಲದವರು ಎಂದು ಕನಿಷ್ಠ ವೇತನ ನೀಡಲಾಗಿದೆಯೇ; ವಿನಃ ಅರ್ಥಾಥ್ ಅರೆ ಕುಶಲರು ಮತ್ತು ಕುಶಲರಲ್ಲದವರು ಎಂಬ ಹುದ್ದೆಗಳಿರುವುದಿಲ್ಲ ಈ ಬಗ್ಗೆ ಸ್ಪಷ್ಟನೆ ನೀಡುವುದು. | ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯಲ್ಲಿ ದಿನಾಂಕ:01.07.1984ರ ನಂತರ ಸೇವೆಯಲ್ಲಿ ತೊಡಗಿಸಲಾದ ದಿನಗೂಲಿ ನೌಕರರನ್ನು ಯಾವುದೇ ಮಂಜೂರಾದ ಖಾಲಿ ಹುದ್ದೆಗೆ ಅಭಿಮುಖವಾಗಿ ಸೂಕ್ತ ಅರ್ಹತೆ ಹೊಂದಿರುವ ನೌಕರರಾಗಿ ನೇಮಕಾತಿ ಮಾಡಿರುವುದಿಲ್ಲ. ದಿನಾಂಕ: 01.07.1984ರ ನಂತರ ನೇಮಕಾತಿಗೊಂಡ ಸರ್ಕಾರದ ವಿವಿಧ ಇಲಾಖೆಗಳು, ಜಿಲ್ಲಾ ಪಂಚಾಯತ್‌ಗಳು ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ದಿನಗೂಲಿ ನೌಕರರನ್ನು ಸೇವೆಯಿಂದ ತೆಗೆದು ಹಾಕುವುದನ್ನು ತಡೆಹಿಡಿದು ರಿಟ್ ಅರ್ಜಿ ಸಂಖ್ಯೆ: 12610/1993 ರಲ್ಲಿ ಕರ್ನಾಟಕ ಉಚ್ಛನ್ಯಾಯಾಲಯವು |

| | | |
|---|---|---|
| | | ದಿನಾಂಕ:23.04.1993ರಂದು ಆದೇಶಿಸಿತ್ತು. ಹೀಗಾಗಿ ದಿನಾಂಕ: 01.07.1984ರ ನಂತರ ನೇಮಕಗೊಂಡ ದಿನಗೂಲಿ ನೌಕರರನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶಕ್ಕೊಳಪಟ್ಟು ಮುಂದುವರಿಸಲಾಗಿದೆ. ಆ ಸಂದರ್ಭದಲ್ಲಿ ಮುದ್ರಣ ಇಲಾಖೆಯಲ್ಲಿ ತೊಡಗಿಸಲಾದ ದಿನಗೂಲಿ ನೌಕರರುಗಳಿಗೆ ಕನಿಷ್ಠ ವೇತನ ಕಾಯ್ದೆಯನ್ನು ಅಳವಡಿಸಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಕಕಾ 36 ಎಲ್.ಎಂ.ಡಬ್ಲ್ಯೂ 88, ದಿನಾಂಕ:13.04.1994 ರಲ್ಲಿ ನಿಗಧಿಪಡಿಸಿರುವಂತಹ ಮಜೂರಿಯನ್ನು ಅಭ್ಯರ್ಥಿಸತಕ್ಕದ್ದೆಂದು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 20 ಸೇಸ್ಥಅ 94, ದಿನಾಂಕ:21.11.1994 ರಲ್ಲಿ ಆದೇಶಿಸಿದ್ದು, ಅದರಂತೆ ಇಲಾಖೆಯಲ್ಲಿನ ದಿನಗೂಲಿ ನೌಕರರನ್ನು ಮುದ್ರಣಾ ಇಲಾಖೆಯ ಆದೇಶ ಸಂಖ್ಯೆ:667/94-95, ದಿನಾಂಕ:31.12.1994ರಲ್ಲಿ ಕುಶಲ ಕೆಲಸಗಾರರಿಗೆ ಸಹಾಯಕರು (ಅರ್ಥಾತ್ ಅರೆಕುಶಲ ದಿನಗೂಲಿ ನೌಕರರು) ಹಾಗೂ ಕುಶಲರಲ್ಲದ ದಿನಗೂಲಿ ನೌಕರರು (ಅರ್ಥಾತ್ ಜವಾನರು : ಕ್ಲೀನರ್:ಮಜ್ದೂರ್ಸ್ ) ಎಂದು ವಿಂಗಡಿಸಿ ಮಜೂರಿ ನಿಗಧಿಪಡಿಸಲಾಗಿರುತ್ತದೆ. |
| ಈ) | ಈ ನೌಕರರನ್ನು ಸಕ್ರಮಗೊಳಿಸದೇ ಇರುವುದರಿಂದ ಆಗಿರುವ ಅನ್ಯಾಯವನ್ನು ಪರಿಶೀಲಿಸಿ ಸರ್ಕಾರ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು) | ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಪೀಲು (ಸಿವಿಲ್ 3505-3612/1999, ದಿ:10.04.2006ರ ರಾಜ್ಯ ಸರ್ಕಾರ ಮತ್ತು ಇತರರು ವಿರುದ್ಧ ಉಮಾದೇವಿ ಮತ್ತು ಇತರರು ಪ್ರಕರಣದಡಿ ಸಕ್ರಮಾತಿಗೆ ವಿಧಿಸಿರುವ ಮಾನದಂಡಗಳನ್ನು ಪೂರೈಸದೇ ಇರುವುದರಿಂದ ದಿನಗೂಲಿ ನೌಕರರುಗಳನ್ನು ಸಕ್ರಮಾತಿಗೊಳಿಸಲು ಅವಕಾಶವಿರುವುದಿಲ್ಲ. ಆದಾಗ್ಯೂ ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012ನ್ನು ಜಾರಿಗೆ ತಂದು ದಿನಗೂಲಿ ನೌಕರರಿಗೆ ಅಗತ್ಯ ಆರ್ಥಿಕ ಸೌಲಭ್ಯಗಳನ್ನು ನೀಡಲಾಗಿದೆ. |

**ಸಂಖ್ಯೆ: ಇಪಿ 72 ಇಎಸ್‌ಡಬ್ಲ್ಯೂ 2022**

(ಬಿ.ಸಿ.ನಾಗೇಶ್)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ

ಹಾಗೂ ಸಕಾಲ ಸಚಿವರು